# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಬಸನಗೌಡ ಬಾದರ್ಲಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರು ನಿಯಮ-73 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

:: ಪ್ರಶ್ನೆ ::

ಸಿಂಧನೂರು ನಗರದಲ್ಲಿ ಕುಡಿಯುವ ನೀರಿಗಾಗಿ 24/7 ಹಾಗೂ ಒಳಚರಂಡಿ ಕಾಮಗಾರಿಗಳು ಕಳಪೆ ಕಾಮಗಾರಿಯಾಗಿದ್ದು, ಕಾಮಗಾರಿಯು ಸಹ ಪೂರ್ಣಗೊಂಡಿರುವುದಿಲ್ಲ. ಇದರಿಂದಾಗಿ ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗಿದ್ದು, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಿಂಧನೂರಿನ ಜನತೆಗೆ 24/7 ಕುಡಿಯುವ ನೀರಿನ ಸೌಲಭ್ಯವನ್ನು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆಂದು ಸರ್ಕಾರದ ಗಮನ ಸಳೆಯ ಬಯಸುತ್ತೇನೆ.

:: ಉತ್ತರ ::

ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್‌ಕೆಯುಎಸ್‌ಐಪಿ) ಯೋಜನೆಯಡಿ ಸಿಂಧನೂರು ನಗರಕ್ಕೆ ಕುಡಿಯವ ನೀರು ಸರಬರಾಜು, ಒಳಚರಂಡಿ, ಮಳೆ ನೀರು ಚರಂಡಿ, ನಗರ ರಸ್ತೆ, ಕೊಳಚೆ ಪ್ರದೇಶಾಭಿವೃದ್ಧಿ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಸರ್ಕಾರದ ಆದೇಶ ಸಂಖ್ಯೆ: ನಅಇ 40 ಪಿಆರ್‌ಜೆ 2006, ದಿನಾಂಕ:26-05-2006 ರಂದು ತಾತ್ವಿಕವಾಗಿ ಮಂಜೂರಾ ನೀಡಲಾಗಿರುತ್ತದೆ.

ಎನ್‌ಕೆಯುಎಸ್‌ಐಪಿ ಯೋಜನೆಯಡಿ ಸಿಂಧನೂರು ನಗರದಲ್ಲಿ ಕೈಗೊಂಡಿರುವ 24X7 ಕುಡಿಯುವ ನೀರು ಹಾಗೂ ಒಳಚರಂಡಿ ಕಾಮಗಾರಿಗಳ ವಿವರಗಳು ಕೆಳಕಂಡಂತಿದೆ:

1) **24X7 ಕುಡಿಯುವ ನೀರು ಸರಬರಾಜು ಕಾಮಗಾರಿ:**

- ಗುತ್ತಿಗೆದಾರರು : ಮೆ|| ಎಸ್‌ಪಿಎಂಎಲ್ ಇನ್ಫ್ರಾ ಲಿಮಿಟೆಡ್, ನವದೆಹಲಿ
- ಗುತ್ತಿಗೆ ಕರಾರು ಒಪ್ಪಂದ ದಿನಾಂಕ : 17/12/2014
- ಗುತ್ತಿಗೆ ಮೊತ್ತ: ರೂ.80.67 ಕೋಟಿ (ಕಾರ್ಯಚರಣೆ ಮತ್ತು ನಿರ್ವಹಣೆ ವೆಚ್ಚ ರೂ.18.63 ಕೋಟಿಗಳು ಹೊರತುಪಡಿಸಿ).
- ಪರಿಷ್ಕೃತ ಗುತ್ತಿಗೆ ಮೊತ್ತ: ರೂ.96.48 ಕೋಟಿ (ಫೇಸ್-1).
- ಕಾಮಗಾರಿ ಪೂರ್ಣಗೊಳಿಸಬೇಕಾದ ದಿನಾಂಕ: 16/06/2017
- ಕಾಲ ವಿಸ್ತರಣೆ ದಿನಾಂಕ 30/04/2023 (11 ಬಾರಿ)
- ಕರಾರಿನಲ್ಲಿ ನಿಗಧಿಪಡಿಸಿರುವಂತೆ, ಯೋಜನೆಯನ್ನು ಮೂರು ಹಂತದಲ್ಲಿ ಅನುಷ್ಠಾನಗೊಳಿಸಿ ಪೂರ್ಣ ಗೊಳಿಸಬೇಕಾಗಿರುತ್ತದೆ.
    - ಹಂತ 1: ಕಾಮಗಾರಿ ಅನುಷ್ಠಾನ (30 ತಿಂಗಳು) ದಿನಾಂಕ:16/06/2017
    - ಹಂತ 2 : ಪ್ರಾಯೋಗಿಕ ನಿರ್ವಹಣೆ ಹಂತ (3 ತಿಂಗಳು) ದಿನಾಂಕ:16/09/2017
    - ಹಂತ 3: 24/7 ನಿರ್ವಹಣೆ ಹಾಗೂ ಕಾರ್ಯಾಚರಣೆ (60 ತಿಂಗಳು) ದಿನಾಂಕ:16/09/2022
- ಸೆಪ್ಟಂಬರ್ 2024 ರವರೆಗೆ ಭೌತಿಕ ಪ್ರಗತಿ: ಶೇ.90%
- ಆರ್ಥಿಕ ಪ್ರಗತಿ: ರೂ.86.31 ಕೋಟಿ (89.44%)



Scanned with OKEN Scanner

## ಕಾಮಗಾರಿಗಳ ವಿವರ:

| ಕ್ರ. ಸಂ. | ಕಾಮಗಾರಿ | ಗುರಿ | ಸಾಧನೆ | ಬಾಕಿ |
|---|---|---|---|---|
| 1 | ತುರುವಿಹಾಳ್ ಹತ್ತಿರ 140 ಎಕರೆ ವಿಸ್ತೀರ್ಣದಲ್ಲಿ 2100 ಎಂ.ಎಲ್ ಸಾಮರ್ಥ್ಯದ ಕೆರೆ ಹಾಗೂ ಜಾಕ್ ವೆಲ್ | 1 ಸಂಖ್ಯೆ | 1 ಸಂಖ್ಯೆ | ಕೆರೆ ಕಾಮಗಾರಿ ನವೆಂಬರ್ 2021ರಲ್ಲಿ ಹಾಗೂ ಜಾಕ್ ವೆಲ್ ಕಾಮಗಾರಿ ಏಪ್ರಿಲ್ 2022 ಪೂರ್ಣಗೊಂಡಿದೆ. |
| 2 | 700 ಎಂ.ಎಂ ವ್ಯಾಸದ BWSCP ಕಚ್ಚಾ ನೀರಿನ ಗುರುತ್ವಾಕರ್ಷಣ ಕೊಳವೆ | 17.5 ಕಿ.ಮೀ | 17.5 ಕಿ.ಮೀ | |
| 3 | ಕುಷ್ಟಗಿ ರಸ್ತೆ ಮೀನಾ ಕೆರೆ ಬಳಿ ಹೊಸ 10 MLD ಜಲ ಶುದ್ಧೀಕರಣಾಗಾರದ ಘಟಕ | 1 ಸಂಖ್ಯೆ | 1 ಸಂಖ್ಯೆ | ಏಪ್ರಿಲ್ 2022 ರಲ್ಲಿ ಪೂರ್ಣಗೊಂಡು ಚಾಲನೆಯಲ್ಲಿದೆ |
| 4 | ವಿವಿಧ ವ್ಯಾಸಗಳ ಶುದ್ಧ ನೀರಿನ ಏರು ಕೊಳವೆ | 18.38 ಕಿ.ಮೀ | 18.38 ಕಿ.ಮೀ | ಡಿಸಂಬರ್ 2020 ರಲ್ಲಿ ಪೂರ್ಣಗೊಳಿಸಿ ಚಾಲನೆಯಲ್ಲಿದೆ. |
| 5 | ಮೇಲ್ಮಟ್ಟದ ಜಲಸಂಗ್ರಹಗಾರ (3 ಸಂಖ್ಯೆ : 10 ಲಕ್ಷ ಸಾಮರ್ಥ್ಯ; 2 ಸಂಖ್ಯೆ : 5 ಲಕ್ಷ ಸಾಮರ್ಥ್ಯ) | 5 ಸಂಖ್ಯೆ | 5 ಸಂಖ್ಯೆ | |
| 6 | ವಿತರಣಾ ಜಾಲದ | 206.07 ಕಿ.ಮೀ | 205.58 ಕಿ.ಮೀ | 0.49 ಕಿ.ಮೀ |
| 7 | ಗೃಹ ಸಂಪರ್ಕ | 13946 ಸಂಖ್ಯೆ | 12733 ಸಂಖ್ಯೆ | 1213 ಸಂಖ್ಯೆ |

- ಅಲ್ಲದೆ, ವಿತರಣಾ ವ್ಯವಸ್ಥೆಯಲ್ಲಿ ಬಾಕಿ ಲಿಂಕಿಂಗ್ ಕಾಮಗಾರಿಗಳು: 739 ಸಂಖ್ಯೆ

**ಪ್ರಸ್ತುತ ಸ್ಥಿತಿಗತಿ:**

- ಗುತ್ತಿಗೆದಾರರ ವಿಳಂಬದಿಂದ ಗುತ್ತಿಗೆ ಅವಧಿಯನ್ನು 11 ಬಾರಿ ವಿಸ್ತರಿಸಿದ್ದಾಗ್ಯೂ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲವಾದ ಕಾರಣ ಅಂತಿಮವಾಗಿ ಗುತ್ತಿಗೆ ಅವಧಿಯನ್ನು ದಿನಾಂಕ:30/04/2023 ರವರೆಗೆ ವಿಸ್ತರಿಸಲಾಗಿತ್ತು. ಆದರೂ ಸಹ ಗುತ್ತಿಗೆದಾರರು ಡಿಸಂಬರ್-2022 ರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಿದ ಕಾರಣ ಗುತ್ತಿಗೆದಾರರಿಗೆ ದಂಡ ವಿಧಿಸಿ ಗುತ್ತಿಗೆ ಕರಾರನ್ನು ರದ್ದುಗೊಳಿಸಲು ಉದ್ದೇಶಿಸಿ ದಿನಾಂಕ:27/06/2023 ರಂದು ನೋಟೀಸು ಜಾರಿಗೊಳಿಸಿ ಬ್ಯಾಂಕ್ ಗ್ಯಾರಂಟಿಗಳನ್ನು ನಗದೀಕರಿಸಲು ಕ್ರಮ ವಹಿಸಲಾಗಿತ್ತು.

- ಗುತ್ತಿಗೆದಾರರು ಸದರಿ ನೋಟೀಸ ಹಾಗೂ ಬ್ಯಾಂಕ್ ಗ್ಯಾರಂಟಿಗಳ ನಗದೀಕರಿಸುವುದನ್ನು ಪ್ರಶ್ನಿಸಿ ಕೊಲ್ಕತ್ತಾ ನ್ಯಾಯಾಲಯದಲ್ಲಿ ದಿನಾಂಕ:05/07/2023 ರಂದು ತಡೆ ಆಜ್ಞೆ (Injunction Order) ತಂದಿರುತ್ತಾರೆ. ಸದರಿ ತಡೆ ಆಜ್ಞೆಯನ್ನು ತೆರವುಗೊಳಿಸಲು ಎಲ್ಲಾ ರೀತಿಯಲ್ಲಿ ಕ್ರಮ ವಹಿಸಲಾಗಿದೆ.

- ಗುತ್ತಿಗೆದಾರರು ಹಲವು ವಿವಾದಗಳನ್ನು (dispute) ಇತ್ಯರ್ಥಪಡಿಸಿಕೊಳ್ಳಲು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ Arbitrator ಅನ್ನು ನೇಮಿಸಬೇಕೆಂದು ದಾವೆ ಹೂಡಿದ್ದರು. ಸದರಿ ದಾವೆಯನುಸಾರ ನ್ಯಾಯಾಲಯವು ಈ ಹಿಂದೆ ನೇಮಿಸಿದ್ದ Arbitrator ರವರನ್ನೆ ನೇಮಿಸಿ ದಿನಾಂಕ:18/03/2024 ರಂದು ಪ್ರಥಮ ಹಂತದ ವಿಚಾರಣೆ ಕೈಗೊಳ್ಳಲು ಹಾಗೂ ಕೊಲ್ಕೊತ್ತ ಸಿವಿಲ್ ನ್ಯಾಯಾಲಯದಲ್ಲಿ ಹೂಡಿರುವ ದಾವೆಯನ್ನು ವಾಪಸ್ ಪಡೆಯುವುದು ಹಾಗೂ ಸದರಿ ಆದೇಶವನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಲು ಸೂಚಿಸಿ ದಿನಾಂಕ:29/02/2024 ರಂದು ಆದೇಶಿಸಿರುತ್ತಾರೆ.

- ಮುಂದುವರೆದಂತೆ, ದಿನಾಂಕ:18/03/2024 ರಂದು ಪ್ರಥಮ ಹಂತದ ವಿಚಾರಣೆಯನ್ನು ಕೈಗೊಂಡಿದ್ದು ಗುತ್ತಿಗೆದಾರು ಸಲ್ಲಿಸಿರುವ ಮಧ್ಯಂತರ ಪರಿಹಾರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ದಿನಾಂಕ:26/03/2024 ರಂದು ನಿಗಧಿಪಡಿಸಲಾಗಿತ್ತು. ಅದರಂತೆ ಆಕ್ಷೇಪಣೆಗಳನ್ನು ಸಲ್ಲಿಸಲಾಗಿದೆ. ದಿನಾಂಕ:23/04/2024 ರಂದು ಅರ್ಜಿದಾರರು ಅಂಶವಾರು ವಿಚಾರವನ್ನು ಮಂಡಿಸಿರುತ್ತಾರೆ.



Scanned with OKEN Scanner

- Arbitrator ರವರಲ್ಲಿ ದಿನಾಂಕ:24/06/2024 ರಂದು ಗುತ್ತಿಗೆದಾರರು ಸೌಹಾರ್ದಯುತ ಇತ್ಯರ್ಥ ಮಾಡಿಕೊಳ್ಳಲು (Amicable Settlement) ಮನವಿ ಮಾಡಿಕೊಂಡಿರುತ್ತಾರೆ. Arbitrator ರವರು ಗುತ್ತಿಗೆದಾರರ ಮನವಿಯನ್ನು ಪರಿಗಣಿಸಿರುತ್ತಾರೆ.

- ಪ್ರಕರಣದ ಮುಂದಿನ ವಿಚಾರಣೆಯನ್ನು ದಿನಾಂಕ:22/01/2025 ರಂದು ನಿಗಧಿಪಡಿಸಲಾಗಿದೆ.

- ಬಾಕಿ ಕಾಮಗಾರಿಗಳನ್ನು ಕೈಗೊಳ್ಳಲು ತಡೆಯಾಜ್ಞೆ ಇದ್ದ ಕಾರಣ ಸೂಕ್ತ ಕಾನೂನು ಅಭಿಪ್ರಾಯ ಕೋರಿ ಕಾನೂನು ಇಲಾಖೆಯವರನ್ನು ಕೋರಲಾಗಿರುತ್ತದೆ.

- ಕಾನೂನು ಇಲಾಖೆಯವರು "As Interim Order is not vacated, the KUIDFC cannot go ahead with the step to enforce the impugned intended termination notice and take further action is opinion of the Law Department" ಎಂದು ಅಭಿಪ್ರಾಯಿಸಿರುತ್ತಾರೆ.

- ದಿನಾಂಕ:10-07-2024 ರಂದುಜರುಗಿದ 51ನೇ ಅಧಿಕಾರಯುತ ಸಮಿತಿ ಸಭೆಯಲ್ಲಿ ಸ್ಥಳೀಯ ಸಂಸ್ಥೆಯ ಬಾಕಿ ವಂತಿಕೆ ಮೊತ್ತ ಹಾಗೂ ಇತರೆ ಸ್ಥಳೀಯ ಸಂಸ್ಥೆಯ Fund ಬಳಸಿ ಕಾನೂನು ತಜ್ಞರ ಸಲಹೆ ಅನುಸಾರ ಬಾಕಿ ಕಾಮಗಾರಿಗಳನ್ನು ಸ್ಥಳೀಯ ಸಂಸ್ಥೆಯವರಿಂದ ಪೂರ್ಣಗೊಳಿಸಲು ಅನುಮೋದಿಸಿರುತ್ತಾರೆ.

- ವಿತರಣಾ ಜಾಲವನ್ನು ಅಳವಡಿಸಿದ್ದು, ಜೊತೆ ಜೊತೆಗೆ ಸದರಿ ಕೊಳವೆ ಮಾರ್ಗಗಳಲ್ಲಿ ನೀರನ್ನು ಹರಿಸಿ ಚಾಲನೆಗೊಳಿಸದ ಕಾರಣ ಇತರೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ನಿರ್ವಹಿಸುವ ಗುತ್ತಿಗೆದಾರರು ಹಾನಿ ಮಾಡಿರುವ ಸಂಭವವಿದೆ.

- ಕಾಮಗಾರಿಯಲ್ಲಿ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳಲಾಗಿದೆ.

- ಗುತ್ತಿಗೆದಾರರ ವಿಳಂಬಕ್ಕೆ ಕರಾರಿನ ನಿಯಮಾನುಸಾರ ದಂಡ ವಿಧಿಸಲಾಗಿದೆ.

- ಆ ಪ್ರಕಾರ Arbitration ಅಂತಿಮ ತೀರ್ಮಾನವನ್ನು ಪರಿಶೀಲಿಸಿ ನಗರದ ಯೋಜನಾ ಪ್ರದೇಶದಲ್ಲಿ ಗುತ್ತಿಗೆ ಅನುಸಾರ ಬಾಕಿ ಕಾಮಗಾರಿಗಳನ್ನು ನಿಯಮಾನುಸಾರ ಅಧಿಕಾರಯುತ ಸಮಿತಿಯ ನಿರ್ದೇಶನದಂತೆ ನಗರಸಭೆ ವತಿಯಿಂದ ಕೈಗೊಳ್ಳಬೇಕಾಗಿರುತ್ತದೆ.

- **ಕಾಮಗಾರಿ ಪೂರ್ಣಗೊಳ್ಳದಿರುವುದಕ್ಕೆ ಕಾರಣಗಳು:**
  - ಮಾರ್ಚ್ 2020 ರಿಂದ ಕೋವಿಡ್-19 ಪಿಡುಗಿನ ಲಾಕ್ಡೌನ್ ಘೋಷಣೆಯಾದ ಕಾರಣ ಕಾಮಗಾರಿ ಸ್ಥಗಿತವಾಗಿತ್ತು.
  - ಗುತ್ತಿಗೆದಾರರು ಸಾಮಗ್ರಿಗಳು ಹಾಗೂ ಮಾನವ ಸಂಪನ್ಮೂಲ ಕ್ರೂಡಿಕರಿಸಿ ಕಾಮಗಾರಿ ನಿರ್ವಹಿಸುವಲ್ಲಿ ವಿಫಲವಾಗಿರು .

2. **ಒಳಚರಂಡಿಯೋಜನೆ:**
   - ಗುತ್ತಿಗೆದಾರರು : ಮೆ|| ಯು.ಪಿ.ಎಲ್.ಇ.ಇ, ಇನ್ಫ್ರಾಲಿಮಿಟೆಡ್, ಗುಜರಾತ್
   - ಗುತ್ತಿಗೆ ಕರಾರು ಒಪ್ಪಂದ ದಿನಾಂಕ: 10/03/2015
   - ಗುತ್ತಿಗೆ ಮೊತ್ತ : ರೂ.55.75 ಕೋಟಿ
   - ಪರಿಷ್ಕೃತ ಗುತ್ತಿಗೆ ಮೊತ್ತ: ರೂ.61.31 ಕೋಟಿ.
   - ಕಾಮಗಾರಿ ಪೂರ್ಣಗೊಳಿಸ ಬೇಕಾದ ದಿನಾಂಕ: 24/03/2017
   - ಕಾಲ ವಿಸ್ತರಣೆ ದಿನಾಂಕ: 30/04/2022
   - ಎಸ್.ಟಿ.ಪಿ ನಿರ್ಮಾಣದ ಜಮೀನು ಹಸ್ತಾಂತರದ ವಿಳಂಬ, ಹಾಗೂ ತತ್ಸಂಬಂಧಿತ ವಿನ್ಯಾಸದ ಬದಲಾವಣೆಯಿಂದ ಮತ್ತು ವಿದ್ಯುತ್ ಮಾರ್ಗದ ಬದಲಾವಣೆಯಿಂದಾಗಿ ವಿಳಂಬಗೊಂಡಿರುತ್ತದೆ. ಜೊತೆಗೆ ಗುತ್ತಿಗೆದಾರರ ವಿಳಂಬವು ಕೂಡ ಕಾರಣವಾಗಿರುತ್ತದೆ.



Scanned with OKEN Scanner

- ಕಾಮಗಾರಿಗಳ ವಿವರ:

| ಕ್ರ. ಸಂ. | ಕಾಮಗಾರಿ | ಗುರಿ | ಸಾಧನೆ | ಬಾಕಿ |
|---|---|---|---|---|
| 1 | ಒಳ ಚರಂಡಿ ಜಾಲ | 115.38 ಕಿ.ಮೀ | 115.38 ಕಿ.ಮೀ | -- |
| 2 | ಮ್ಯಾನ್ ಹೋಲ್ | 4214 ಸಂಖ್ಯೆ | 4214 ಸಂಖ್ಯೆ | -- |
| 3 | ಜಲ ತ್ಯಾಜ್ಯ ಪಡೆಯುವ ಚೆಂಬರ್ | 6073 ಸಂಖ್ಯೆ | 6073 ಸಂಖ್ಯೆ | -- |
| 4 | ವೆಟ್‌ವೆಲ್ | 3 ಸಂಖ್ಯೆ | 3 ಸಂಖ್ಯೆ | ಪ್ರಾಯೋಗಿಕವಾಗಿ ಚಾಲನೆಯಲ್ಲಿದೆ |
| 5 | ಎಲೆಕ್ಟ್ರೋಮೆಕ್ಯಾನಿಕಲ್ ಉಪಕರಣಗಳು | 3 ಸೆಟ್ | 3 ಸೆಟ್ | -- |
| 6 | ತ್ಯಾಜ್ಯ ನೀರು ಸಂಸ್ಕರಣ ಘಟಕ 12 ಎಂಎಲ್‌ಡಿ ಸಾಮರ್ಥ್ಯದ ಎಫ್.ಎ.ಎಲ್ ಮಾದರಿ | 1ಸಂಖ್ಯೆ | 1ಸಂಖ್ಯೆ | ಪ್ರಾಯೋಗಿಕವಾಗಿ ಚಾಲನೆಯಲ್ಲಿದೆ |
| 7 | 11 KV Express Feeder Main | 12.33 ಕಿ.ಮೀ | 12.33 ಕಿ.ಮೀ | -- |
| 8 | 200, 300 & 600 DI Rising Main | 3.35 ಕಿ.ಮೀ | 3.35 ಕಿ.ಮೀ | -- |

- ಸೆಪ್ಟೆಂಬರ್ 2024 ಕ್ಕೆ ಆರ್ಥಿಕ ಪ್ರಗತಿ ರೂ.60.97 ಕೋಟಿ.
- ಭೌತಿಕ ಪ್ರಗತಿ ಶೇ.99 ಸಾಧಿಸಿದೆ.
- ಬಾಕಿ ಕಾಮಗಾರಿ ವಿವರ:
  - ಒಳಚರಂಡಿ ಜಾಲದ ಲಿಂಕಿಂಗ್ ಕಾಮಗಾರಿ: 40 ಸಂಖ್ಯೆ
  - ಒಳಚರಂಡಿ ಜಾಲದಲ್ಲಿ ನೀರು ಹರಿಯುವಿಕೆಯ ಪರೀಕ್ಷೆ : 60 ಕಿ.ಮೀ
  - ಇತರೆ ಇಲಾಖೆಗಳ ಗುತ್ತಿಗೆದಾರರು ರಸ್ತೆ ಅಭಿವೃದ್ಧಿ ಪಡಿಸುವಾಗ ಒಳಚರಂಡಿ ಜಾಲ ಹಾಗೂ ಮ್ಯಾನ್ ಹೋಲ್ ಗಳಲ್ಲಿ ಅನುಪಯುಕ್ತ ಸಾಮಗ್ರಿಗಳ ತೆರವು ಕಾಮಗಾರಿ.
- ಕಾಮಗಾರಿಯ ವಿಳಂಬಕ್ಕೆ ಗುತ್ತಿಗೆದಾರರಿಂದ ದಂಡ ರೂ.69.11ಲಕ್ಷ ವಸೂಲಿ ಮಾಡಲಾಗಿದೆ.
- ಮೇಲಿನ ಬಾಕಿ ಕಾಮಗಾರಿಗಳನ್ನು ಮಾರ್ಚ್-2025 ರೊಳಗೆ ಪೂರ್ಣಗೊಳಿಸಿ ನಗರಸಭೆಗೆ ಹಸ್ತಾಂತರಿಸಲು ಕ್ರಮ ವಹಿಸಲಾಗುವುದು.

**ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ (NGT) ಪರಿಸರ ಪರಿಹಾರ ಯೋಜನೆಯಡಿಯಲ್ಲಿ ಸಿಂಧನೂರು ನಗರದ ಒಳಚರಂಡಿ ವ್ಯವಸ್ಥೆಯ ಉನ್ನತೀಕರಣ ಮತ್ತು ಹೊಸ ನಿರ್ಮಾಣ**

ಸಿಂಧನೂರು ನಗರದ ಒಳಚರಂಡಿ ವ್ಯವಸ್ಥೆಯ ಉನ್ನತೀಕರಣ ಮತ್ತು ಹೊಸ ನಿರ್ಮಾಣ ಮಾಡಲು NGT ಯೋಜನೆಯಡಿಯಲ್ಲಿ ರೂ. 20.00 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ಪ್ರಸ್ತುತ ವಿಸ್ತೃತಾ ಯೋಜನಾ ವರದಿ (DPR)ಯನ್ನು ಸಿದ್ಧಪಡಿಸಲಾಗುತ್ತಿದ್ದು, ಶೀಘ್ರವಾಗಿ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳಲಾಗುವುದು. ಸದರಿ ಯೋಜನೆಯಲ್ಲಿ ಒಳಚರಂಡಿ, ಮನೆ ಸಂಪರ್ಕ ಕಲ್ಪಿಸಲು ಅವಕಾಶವಿದ್ದು, ಮೇಲೆ ಅನುಷ್ಠಾನಗೊಳಿಸಲಾಗಿರುವ ಒಳಚರಂಡಿ ಯೋಜನೆಗೆ ಪೂರಕವಾಗಿರುತ್ತದೆ.

ನಅಇ 197 ಪಿಆರ್‌ಜೆ 2024

(ಬಿ. ಎಸ್. ಸುರೇಶ )
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು.



Scanned with OKEN Scanner